**ಸಿ.ಸಿ.ನಂ.: 2034/2023**

ಪಿ.ಡಬ್ಲ್ಯೂ: **1**

(ಇಂದು ದಿನಾಂಕಃ **27-03-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು -ಆರೋಪಿ ಪರ ಶ್ರೀ. V.P.T. ವಕೀಲರಿಂದ**

1. ನಾನು ಬಟ್ಟೆ ಅಂಗಡಿಯನ್ನು ಹೊಂದಿರುತ್ತೇನೆ. ನಾನು ಹೊಂದಿರುವ ಅಂಗಡಿಯು ಭಾಡಿಗೆ ಜಾಗದಲ್ಲಿ ಇದೆ. ನಾನು ತಿಂಗಳಿಗೆ ರೂ.7100-00 ಭಾಡಿಗೆಯನ್ನು ನೀಡಿರುತ್ತೇನೆ. ನನ್ನ ಅಗಂಡಿಯು ಮೊದಲಿನಿಂದಲೂ ಅದೇ ಜಾಗದಲ್ಲಿ ಇದೆ. ಸಾಮಾನ್ಯವಾಗಿ ನಮ್ಮ ಬಟ್ಟೆ ಅಂಗಡಿಯಲ್ಲಿ ಎಷ್ಟು ವ್ಯಾಪಾರ ಆಗುತ್ತದೆ ಎಂದರೆ ಸಾಕ್ಷಿಯು ಸದ್ರಿ ವ್ಯಾಪಾರವು ಸೀಜನ್ ಮೇಲೆ ಅವಲಂಬಿತವಾಗಿಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿ ದಿನ ನನ್ನ ಬಟ್ಟೆ ಅಂಗಡಿಯಲ್ಲಿ 10-15 ಸಾವಿರ ಆದಾಯ ಇರುತ್ತದೆ. ನಾನು ನನ್ನ ಬಟ್ಟೆ ವ್ಯಾಪಾರಕ್ಕೆ ಸಂಬಂಧಿಸಿದ ವ್ಯಾಪಾರವು ನನ್ನ ಖಾತೆಗೂ ಬಿಳುತ್ತದೆ ಹಾಗೂ ನಗದಿನ ರೂಪದಲ್ಲಿಯೂ ಸಹ ಇರುತ್ತದೆ.

2. ನಾನು ಕರಂಟ ಅಕೌಂಟನ್ನು ಹೊಂದಿರುತ್ತೇನೆ. ನಾನು ಎರಡು ಬ್ಯಾಂಕಗಳಲ್ಲಿ ಖಾತೆಯನ್ನು ಹೊಂದಿರುತ್ತೇನೆ. ನನ್ನ ಅಂಗಡಿಯು ಸ್ವಂತ ಅಂಗಡಿಯಾಗಿರುತ್ತದೆ.

3. ನನ್ನ ಮನೆಯ ಹತ್ತಿರ ಆರೋಪಿಗೆ ಸಂಬಂಧಿಸಿಂ ಅಂಗಡಿ ಇರುತ್ತದೆ. ಸದ್ರಿ ಅಂಗಡಿಯು ಆರೋಪಿತನ ತಂದೆಯ ಕಾಲದಿಂದ ಇದೆ. ಆರೋಪಿತನ ಮನೆಯು ಕುಮಟಾದ ಬಸ್ ಡಿಪೋ ಬಳಿ ಇದೆ. ನನ್ನ ಬಟ್ಟೆ ಅಂಗಡಿಯನ್ನು ಹೊರತುಪಡಿಸಿ ನನಗೆ ನನ್ನ ಗಂಡನ ಆದಾಯದ ಮೂಲ ಇದೆ. ನನಗೆ ವ್ಯವಹಾರಿಕ ಜ್ಞಾನ ತುಂಬಾ ಚೆನ್ನಾಗಿ ಇದೆ. ನನಗೆ ಬ್ಯಾಂಕಿನ ವ್ಯವಹಾರದ ಕುರಿತಾಗಿ ಚೆನ್ನಾಗಿ ತಿಳಿದಿದೆ. ನನ್ನ ಗಂಡನು ಹೊರ ದೇಶದಲ್ಲಿ ಉದ್ಯೋಗದಲ್ಲಿ ಇದ್ದಾರೆ. ನನ್ನ ಗಂಡನು ನನಗೆ ಹಣವನ್ನು

ಖಾತೆಯ ಮುಖಾಂತರ ಕಳುಹಿಸುತ್ತಾರೆ. ನನಗೆ ಮಕ್ಕಳು ಇಲ್ಲ. ಖಾತೆಯಿಂದ ಹಣವನ್ನು ವಿತ್ ಡ್ರಾ ಮಾಡುವ ಕುರಿತಾಗಿ ನನಗೆ ವ್ಯವಹಾರದ ಜ್ಞಾನ ಇದೆ.

4. ನಾನು ಆರೋಪಿಯನ್ನು ಹೊರಾತು ಪಡಿಸಿ ಬೇರೆ ಯಾರಿಗೂ ಹಣವನ್ನು ನೀಡಲಿಲ್ಲ. ಸಾಮಾನ್ಯವಾಗಿ ನಷ್ಟದಲ್ಲಿ ಇರುವವರಿಗೆ ಬ್ಯಾಂಕಿನಿಂದ ಸಾಲವನ್ನು ನೀಡುವುದಿಲ್ಲ ಎಂದರೆ ಸರಿ. ಆರೋಪಿತನಿಗೆ ಹಣವನ್ನು ನೀಡಿದ್ದೇನೆ ಎನ್ನಲಾದ ಸಂದರ್ಭದಲ್ಲಿ ಆರೋಪಿ ಹಾಗೂ ನನ್ನನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಆರೋಪಿತನು ಈ ಮೊದಲು ನನ್ನ ಬಳಿ ಹಣವನ್ನು ಪಡೆದುಕೊಳ್ಳುತ್ತಿದ್ದನು ಹಾಗೂ ಸದ್ರಿ ಹಣವನ್ನು ಮರು ಪಾವತಿ ಮಡುತ್ತಿದ್ದನು. ಆರೋಪಿತನು ಈ ಪ್ರಕರಣದ ಪೂರ್ವದಲ್ಲಿ ನನ್ನಿಂದ 10-15 ಸಾವಿರ ಹಣವನ್ನು ಪಡೆದುಕೊಂಡು ಸದ್ರಿ ಹಣವನ್ನು ಆತನು ಮರು ಪಾವತಿಸುತ್ತಿದ್ದನು. ಈ ಹೆಚ್ಚಿನ ಹಣವನ್ನು ಆರೋಪಿತನು ಮರು ಪಾವತಿಸಿರುವುದಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಧಾನ ಪ್ರಭಾರ ಪ್ರ.ದ.ನ್ಯಾ.ದಂ. ಕುಮಟಾ